quickmarketreports.com

Date :15-02-2016

# 2016–17ನೇ ಸಕ್ಕರೆ ಉತ್ಪಾದನಾ ಸೀಸನ್‌ಗೆ ಕಬ್ಬು ಬೆಳೆ ಮಹಾರಾಷ್ಟ್ರದಲ್ಲಿ 25 ಶೇಕಡಾ ಇಳಿಕೆಯಾಗುವ ಸಾಧ್ಯತೆ, ಸಕ್ಕರೆ ದರ ಹೆಚ್ಚಳ ಸಂಭವ

ಭಾರತ ಹೆಚ್ಚು ಸಕ್ಕರೆ ಉತ್ಪಾದಿಸುವ ರಾಜ್ಯ ಮಹಾರಾಷ್ಟ್ರದಲ್ಲಿ 2016–17ನೇ ಸಾಲಿನ ಸಕ್ಕರೆ ಉತ್ಪಾದನಾ ವರ್ಷಕ್ಕೆ ಕಬ್ಬು ಕೃಷಿಯ ಏರಿಯಾ 25 ಶೇಕಡಾ ಇಳಿಕೆಯಾಗುವ ಸಂಭವವಿದೆಯೆನ್ನಲಾಗಿದೆ. ಮಹಾರಾಷ್ಟ್ರದಲ್ಲಿ ಬರಗಾಲದ ಪರಿಣಾಮ ನೀರಿನ ಅಭಾವದಿಂದ ಕಬ್ಬು ಬೆಳೆಯುವ ಪ್ರದೇಶ ಸುಮಾರು 25 ಶೇಕಡಾ ಇಳಿಕೆಯಾಗಬಹುದೆನ್ನಲಾಗಿದೆ. ಇದರಿಂದ ಸಕ್ಕರೆ ಉತ್ಪಾದನೆ ಇಳಿಕೆಯಾಗಿ, ಪಲೂರೈಕೆ ಇಳಿಕೆಯಾಗಬಹುದಾದ್ದರಿಂದ ಸಕ್ಕರೆದರ ಹೆಚ್ಚಳವಾಗಬಹುದು ಮತ್ತು ಇದರಲ್ಲಿ ರೂಡಿಕೆ ಲಾಭದಾಯಕವಾಗಬಹುದೆಂದು ವ್ಯಾಪಾರಿಗಳು ಮತ್ತು ಹೂಡಿಕೆದಾರರ ಅನಿಸಿಕೆ.

ಪ್ರಾಥಮಿಕ ಅಂದಾಜಿನಂತೆ ಕಬ್ಬು ಬೆಳೆಯುವ ಪ್ರದೇಶ 6.5 ರಿಂದ 7 ಲಕ್ಷ ಹೆಕ್ಟೇರ್ ಆಗಬಹುದೆಂದು ಮಹಾರಾಷ್ಟ್ರ ರಾಜ್ಯ ಸಕ್ಕರೆ ಸಹಕಾರಿ ಮಿಲ್‌ಗಳ ಎಂ.ಡಿಯಾದ ಶ್ರೀ ಸಂಜೀವ್ ಬಾಬರ್ ಹೇಳಿದರೆನ್ನಲಾಗಿದೆ. ಸಕ್ಕರೆ ಉತ್ಪಾದನೆಗೆ 550 ಲಕ್ಷ ಟನ್ ಕಬ್ಬು ಲಭ್ಯವಾಗಬಹುದೆನ್ನಲಾಗಿದೆ. ಈಗಿನ ಉತ್ಪಾದನಾ ಸೀಜನ್‌ನಲ್ಲಿ 9.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿದ್ದು, ಸಕ್ಕರೆ ಉತ್ಪಾದನೆಗೆ 760 ಲಕ್ಷ ಟನ್ ಕಬ್ಬು ಲಭ್ಯವಾಗಬಹುದೆಂದು ಸರಕಾರಿ ಅಂಕಿ ಅಂಶಗಳಿಂದ ತಿಳಿಯಲಾಗಿದೆಯೆನ್ನಲಾಗಿದೆ. ಈ ಸೀಸನ್‌ನಲ್ಲಿ ಇದರಿಂದ ಮಹಾರಾಷ್ಟ್ರ 85 ಲಕ್ಷ ಟನ್ ಸಕ್ಕರೆ ಉತ್ಪಾದಿಸಬಹುದೆನ್ನಲಾಗಿದೆ. ಈ ವರ್ಷ ಸಕ್ಕರೆ ದರ ಇಳಿಕೆಯಾಗುವ ಸಾಧ್ಯತೆ ಕಡಿಮೆ ಹಾಗೂ ದರ ಹೆಚ್ಚಳ ಕಾಣಬಹುದೆಂದು ಮುಂಬಯಿ ಸಕ್ಕರೆ ಮಾರಾಟಗಾರರ ಸಂಘದ ಅಧ್ಯಕ್ಷ ಆಶೋಕ್ ಜೈನ್ ಹೇಳಿದ್ದಾರೆನ್ನಲಾಗಿದೆ. ಮಿಲ್‌ಗೋಟ್ ದರಗಳು 1 ಕೆ.ಜಿ.ಗೆ ರೂ.28ಕ್ಕಿಂತ ಕೆಳಗಿಳಿಯಲಾರದೆಂದು ಅವರ ನಿರೀಕ್ಷೆಯಾಗಿದೆ. 2016–17ರ ಕಬ್ಬು ನಾಟಿಯು ಅಂತ್ಯವಾಗುತ್ತಿದ್ದು ಮಹಾರಾಷ್ಟ್ರ 3.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಾಟಿಯಾಗಬಹುದೆನ್ನಲಾಗಿದೆ. ಸರಕಾರಿ ಅಂಕಿ ಅಂಶಗಳ ಪ್ರಕಾರ ಫೆಬ್ರವರಿ 10ರ ತನಕ ಮಹಾರಾಷ್ಟ್ರದಲ್ಲಿ 3.68 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ನಾಟಿಯಾಗಿದೆಯೆನ್ನಲಾಗಿದೆ.